ಇದೆ. ಇಲ್ಲಿ ನಾವು ಪದೇ ಪದೇ ಈ ವಿಷಯವನ್ನು ಚರ್ಚೆ ಮಾಡಿದ್ದೇವೆ. ಈ ವಿಷಯದ ಬಗ್ಗೆ ಕಮಿಟಿಯಲ್ಲಿ ಚರ್ಚೆ ಮಾಡಿ ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳಲಾಗುವುದು. ಈಗ ಪಾಸಗಿಯಾಗಿ ಬೇಕಾದರೆ ಅನೇಕ ವಿಚಾರಗಳನ್ನು ತಿಳಿಸಬಹುದು. ಈ ಮನೆಯಲ್ಲಿ ನಾವು ಏನು ಮಾತಾಡಿದರೂ ಅದು ರೆಕಾರ್ಡ್ ಆಗುತ್ತದೆ. ಭಾರತದ ಕಾನೂನು ನಮಗೆ ಅಡ್ಡ ಬರುತ್ತದೆ. ಕಮಿಟಿ ನೇಮಕ ಮಾಡಿದಮೇಲೆ, ಆ ಕಮಿಟಿಯಲ್ಲಿ ಚರ್ಚೆ ಮಾಡಿ ಸೂಕ್ತ ನಿರ್ಣಯ ತೆಗೆದುಕೊಳ್ಳಲಾಗುವುದು.

ಶ್ರೀ ಗೋಪಾಲ ಪುಕಾಂದ ಕಾನಡೆ.—ಅರಣ್ಯದಲ್ಲಿ ಎಷ್ಟು ಜಮೀನನ್ನು ಅತಿಕ್ರಮ ಮಾಡಿದ್ದಾರೆ, ಅದನ್ನು ಕೇಂದ್ರಸರ್ಕಾರಕ್ಕೆ ಕಳುಹಿಸಿಕೊಡಿ. ಯಾವ ಯಾವ ರೈತರು ಅತಿಕ್ರಮ ಮಾಡಿದ್ದಾರೆ, ಅವರಿಗೆ ಫ್ರೀಯಾಗಿ ಮಂಜೂರ್ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ. ನಾನು ಕೇಳುವುದು ತಮ್ಮ ಕ್ಷೇತ್ರಕ್ಕೂ ಸಂಬಂಧಪಟ್ಟಿದ್ದು ಈ ರಾಜ್ಯಕ್ಕೇ ಸಂಬಂಧಪಟ್ಟಿದ್ದುದು ಎಂಬುದನ್ನು ತಾವು ಮರೆಯಬಾರದು. ತಮ್ಮಲ್ಲೂ ಬಗರ್ ಹುಕುಂ ರೈತರು ಇದ್ದಾರೆ. ದುರ್ಬಲರೂ ಇದ್ದಾರೆ. ನಾವು ಎದ್ದು ನಿಂತಾಗ ತಾವು, ಕುಳಿತುಕೊಳ್ಳಿ, ಕುಳಿತುಕೊಳ್ಳಿ ಎಂದು ಹೇಳುವುದು ಸರಿಯಲ್ಲ.

ಅಧ್ಯಕ್ಷರು.—ಈಗ ಮಾನ್ಯ ಕಾನಡೆಯವರು ಎರಡು ಕ್ಲಾರಿಫಿಕೇಷನ್ ಕೇಳಿದರು, ಮಾನ್ಯ ಸಚಿವರಿಂದ ಉತ್ತರ ತೆಗೆದುಕೊಂಡರು. ನೀವು ಕೂಡ ಅದೇರೀತಿ ಕ್ಲಾರಿಫಿಕೇಷನ್ ಕೇಳಿ ಉತ್ತರ ಪಡೆಯಿರಿ ಎಂದು ನಾನು ಹೇಳುವುದು.

ಶ್ರೀ ಬಿ. ಸ್ವಾಮಿರಾವ್.—ಈಬಗ್ಗೆ ಕಮಿಟಿ ಮಾಡುವುದರಲ್ಲೂ ತೊಡಕು ಇದೆ ಎಂದು ಹೇಳಿದರು. ಆದರೆ ಕೆಲವು ತಾಲ್ಲೂಕುಗಳಲ್ಲಿ ಕಮಿಟಿ ಮಾಡಿದ್ದಾರೆ, ಮತ್ತೆ ಕೆಲವು ತಾಲ್ಲೂಕುಗಳಲ್ಲಿ ಕಮಿಟಿ ಮಾಡಿಲ್ಲ. ಇದರಲ್ಲೂ ರಾಜಕೀಯ ಸೇರಿದೆ. ಹಲವಾರು ವರ್ಷಗಳಿಂದ ಸ್ವಾಧೀನ ನೂಡಿಕೊಂಡು, ಬೆಳೆ ಬೆಳೆಯುತ್ತಿದರೂ, ಅರಣ್ಯ ಇಲಾಖೆಯವರು ಹೆಚ್ಚು ದುಡ್ಡನ್ನು ಸಂಪಾದನೆ ಮಾಡಬೇಕೆಂಬ ದೃಷ್ಟಿಯಿಂದ ಬೆಳೆಯ ಮೇಲೆ ಗಿಡ ಹಾಕುತ್ತಿದ್ದಾರೆ, ಇದನ್ನು ತಾವು ತಡೆಯಬೇಕು. ಇದು ನಿಮ್ಮ ಕ್ಷೇತ್ರದಲ್ಲೂ ಇದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಮಿಟಿ ಮಾಡುವುದರಲ್ಲಿ ಏನೂ ತೊಡಕಿಲ್ಲ. ತೊಡಕಿರುವುದು ಅರಣ್ಯ ಭೂಮಿಯನ್ನು ವರ್ಗಾವಣೆ ಮಾಡುವುದರಲ್ಲಿ. ಕಮಿಟಿ ಮಾಡುವುದಕ್ಕೆ ತೊಡಕಿಲ್ಲ. ಅದನ್ನು ಮಾಡೋಣ. ಎಲ್ಲೆಲ್ಲಿ ಅರಣ್ಯ ಇಲಾಖೆಯವರು ಈ ರೀತಿ ಮಾಡಿದ್ದಾರೆ ಎಂಬ ವಿವರಗಳನ್ನು ಕೊಟ್ಟರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ನಿಯಮ ೩೩೪ರ ಮೇರೆಗೆ

(೧) ಬೀದರಿನ ಕಾರಂಜ ಸಕ್ಕರೆಯಂ ಕಾರ್ಖಾನೆಯೆಂನ್ನು ತೆರೆಯಂಪ ಬಗ್ಗೆ

ಅಧ್ಯಕ್ಷರು.—ಶ್ರೀ ಬಸವರಾಜ್ ಹಾನಗಪ್ಪ ಪಾಟೀಲ್.—ಅಬ್ಸೆಂಟ್.

SRI MOHAMMED LAIQUDDIN.—Daily more than 12000 tons of Sugarcane is being transported to Maharashtra from Bidar District. The production of Sugarcane in Bidar is double of the capacity of the capacity of Bidar Sugar Factory at Hallikhed. Karanja Sugar Factory is sanctioned to Bidar about three years back. Share amount worth more than 65 lakhs were collected. It was promised to start the Karanja Sugar Factory during 1987. No progress is made till today in this direction. Whether the Government is not interested in starting the said Sugar Factory? If not, when this factory will be started, the cane growers of Bidar District are facing great hardship in reaping the benefit

of the honest efforts for want of facility of New Sugar Factory. Hence it needs immediate attention.

ಶ್ರೀ ಆರ್.ಎಲ್. ಜಾಲಪ್ಪ (ಸಹಕಾರ ಸಚಿವರು),—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಹಾಗೆ, ಇಲ್ಲಿ ಸಕ್ಕರೆ ಕಾರ್ಖಾನೆ ಮಾಡಬೇಕೆಂದು ಹೇಳಿ ಅಲ್ಪಸ್ವಲ್ಪ ಷೇರು ಹಣವನ್ನೂ ವಸೂಲಿ ಮಾಡಿದ್ದಾರೆ. ಸರಕಾರದವರು ಇದಕ್ಕೆ ಇನ್ನೂ ಅನುಮತಿ ಕೊಟ್ಟಿಲ್ಲ. ಈಗ ಇರುವ ಹೊಸ ನೀತಿಯ ಪ್ರಕಾರ ಇದನ್ನು ಸರಕಾರಿ ರಂಗದಲ್ಲಿ ಮಾಡಬೇಕೋ ಅಥವಾ ಇದನ್ನು ಬೇರೆ ಜಾಯಿಂಟ್ ಕಮಿಟಿಗಳಿಗೆ ವಹಿಸಬೇಕೋ ಎಂದು ಯೋಚನೆ ಮಾಡುತ್ತಿದ್ದೇವೆ. ಇದರ ಬಗ್ಗೆ ತೀರ್ಮಾನ ತೆಗೆದುಕೊಂಡ ಮೇಲೆ ಮುಂದಿನ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು.—ಶ್ರೀ ಪಂಪಾಪತಿ ಆಬ್ಸೆಂಟ್.

ಶ್ರೀ ಬಿ. ಲಕ್ಕಪ್ಪನವರೇ ನೀವು ಓದಿ.

(೨) ಬೆಂಗಳೂರಿನ ಅಭಿವೃದ್ಧಿ ಪ್ರಾಧಿಕಾರದವರಿಂದ ನಿವೇಶನಗಳನ್ನು ಹಂಚುವುದು

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).—ಮಾನ್ಯ ಅಧ್ಯಕ್ಷರೇ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಕಳೆದ ಐದು ವರ್ಷಗಳಿಂದ ಈವರೆಗೆ ಅರ್ಜಿಗಳನ್ನು ಕರೆದು ಪರಿಶೀಲಿಸಿ ನಿವೇಶನಗಳನ್ನು ಎಷ್ಟು ಮಂದಿಗೆ ನೀಡಿದ್ದಾರೆ. ನಿವೇಶನಗಳನ್ನು ಹಂಚಲು ಪ್ರಾಧಿಕಾರದವರು ರೂಪಿಸಿರುವ ನೀತಿನಿಯಮಗಳೇನು ? ಸುಮಾರು ಏಳೆಂಟು ಬಾರಿ ಅರ್ಜಿ ಸಲ್ಲಿಸಿದ್ದರೂ ಕೂಡಾ ನಿವೇಶನ ಪಡೆದು ಕೊಳ್ಳಲು ಸಾಧ್ಯವಾಗದಿರುವುದಕ್ಕೆ ಕಾರಣಗಳೇನು ? ಯಾವ ಯಾವ ವರ್ಗದ ಜನರಿಗೆ ಯಾವ ಯಾವ ಆಳತೆಗೋಲುಗಳನ್ನು ಉಪಯೋಗಿಸುತ್ತಾರೆ. ಏಳು ಬಾರಿ ಅರ್ಜಿ ಹಾಕಿದವರಿಗೆ ನಿವೇಶನ ದೊರೆಯದ ಸಂದರ್ಭದಲ್ಲಿ ಪ್ರಥಮಬಾರಿಗೆ ಅರ್ಜಿ ಹಾಕಿದವರಿಗೆ ನಿವೇಶನ ದೊರೆತಿರುವಂತಹ ಸಂಧರ್ಭಗಳಲ್ಲಿ ಯಾವ ಆಳತೆಗೋಲು ಉಪಯೋಗಿಸಿದ್ದಾರೆ ? ಈ ರೀತಿಯ ಪ್ರಾಧಿಕಾರದ ಧೋರಣೆಯಿಂದಾಗ ಸಾರ್ವಜನಿಕರಿಗಾಗುತ್ತಿರುವ ತೊಂದರೆಯನ್ನು ಸರಕಾರದವರು ಮನಗಂಡಿದ್ದಾರೆಯೇ ? ಇದೆಲ್ಲದಕ್ಕೂ ಸಂಬಂಧಪಟ್ಟ ಮಂತ್ರಿಗಳು ಸದನಕ್ಕೆ ಹೇಳಿಕೆ ನೀಡಬೇಕೆಂದು ಈ ಸದನದ ಮೂಲಕ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ, ನಿವೇಶನಗಳನ್ನು ಹಂಚಿಕೆಗಾಗಿ ನಿಯಮಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಈಗ ಪ್ರಸಿದ್ಧಪಡಿಸಿದ್ದಾರೆ, ಮತ್ತು ಪ್ರಚುರಪಡಿಸಿದ್ದಾರೆ. ಅದರ ಪ್ರಕಾರ ನಿವೇಶನಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಹಂಚುತ್ತಿದ್ದಾರೆ. ಕೆಲವರಿಗೆ ಬೇಗ ಸಿಕ್ಕಿದೆ, ಕೆಲವರಿಗೆ ವಿಧಾನವಾಗಿ ಸಿಗುತ್ತಿದೆ ಎಂಬ ಮಾತನ್ನು ಹೇಳಿದ್ದಾರೆ. ಅಂಥದ್ದು ಯಾವುದಾದರೂ ಸ್ಪೆಸಿಫಿಕ್ ಆಗಿದ್ದರೆ, ನನಗೆ ಅದನ್ನು ತಾವು ತಿಳಿಸಿದ್ದೇ ಆದರೆ, ಅದನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರ ಗಮನಕ್ಕೆ ತಂದು ಅವರಿಗೆ ನ್ಯಾಯ ಕೊಡಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂಬ ಮಾತನ್ನು ಹೇಳುತ್ತೇನೆ.

(೩) ಬೆಂಗಳೂರು ಅರಮನೆಯ ಆವರಣದಲ್ಲಿ ನಡೆದ ಜಿಲ್ಲಾ ಪರಿಷತ್ ಸಮಾವೇಶದಲ್ಲಿ ಆಹಾರದ ಪೊಟ್ಟಣಗಳನ್ನು ಒದಗಿಸಿರುವವರಿಂದ ಮೋಸ ಹಾಗಿರುವುದು

ಶ್ರೀ ಆರ್. ವೆಂಕಟರಾಮಯ್ಯ (ಮುಳುಬಾಗಿಲ್).—ಮಾನ್ಯ ಅಧ್ಯಕ್ಷರೇ, ೩೧-೧-೮೭ ರಂದು ಬೆಂಗಳೂರು ಅರಮನೆ ಆವರಣದಲ್ಲಿ ಜಿಲ್ಲಾ ಪರಿಷತ್, ಮಂಡಲ ಪಂಚಾಯತ್ ಸದಸ್ಯರು, ಶಾಸಕರು, ಮತ್ತು ಪಾರ್ಲಿಮೆಂಟ್ ಸದಸ್ಯರ ಬೃಹತ್ ಸಮಾವೇಶವನ್ನು ಸರಕಾರದ ವತಿಯಿಂದ ಮಾಡಿ, ೯೦ ಕೌಂಟರ್‌ಗಳಲ್ಲಿ ಊಟದ ವಿಪರ್ಯಾಸ ಮಾಡಿ ಈ ಊಟದ ವ್ಯವಸ್ಥೆಗೊಸ್ಕರ "ಫುಡ್ ಪ್ಯಾಕೆಟ್ ಗಳನ್ನು " ಕೊಡುವ ವ್ಯವಸ್ಥೆಯನ್ನು ಮಾಡಲಾಗಿತ್ತು. ಈ ರೀತಿ ೬೫,೦೦೦ ಫುಡ್ ಪ್ಯಾಕೆಟ್‌ಗಳನ್ನು ಕೊಡಲು ಒಂದು ೧೨,೦೦ ರೂಪಾಯಿಗಳಂತೆ ಕೊಟ್ಟಿದ್ದು. ಆದು ೬.೦೦ ರೂಪಾಯಿಗಳನ್ನು ಕೊಡಲು ಯೋಗ್ಯವಿರಲಿಲ್ಲ. ಅಲ್ಲಿ ೫೦,೦೦೦ ಪ್ಯಾಕೆಟ್‌ಗಳು ಮಾತ್ರ ಮಧ್ಯಾಹ್ನ ೨ ಗಂಟೆಯವರೆಗೆ ಹಂಚಲು ಸರಬರಾಜಾಯಿತು. ಆಹಾರ ಒದಗಿಸದೇ ಹೋದುದಕ್ಕೆ, ದರಿದ್ರ ಅನೇಕ ಆಹ್ವಾನಿತರು ಕೋಪೋದ್ರೇಕದಿಂದ ಶಾಂತಿ ಭಂಗವಾಗುವ ಪರಿಸ್ಥಿತಿಗೆ ಹೋಗಿ, ಪೋಲೀಸರು ಮಧ್ಯೆ ಪ್ರವೇಶಿಸಿ ಅಲ್ಲಿದ್ದ